## ಅಪ್ಪ ಮಗ



ಬಾರಿನಲ್ಲಿ ಒಬ್ಬ ಮುದುಕ ಹಾಗೂ ಒಬ್ಬ ತರುಣ, ಎದುರು ಬದಿರು ಕುಳಿತು ವಿಸ್ಕಿ ಕುಡಿದು, ಕೊನೆಯಲ್ಲಿ ಪರಸ್ಪರ 'ಬೈ ಬೈ' ಹೇಳಿ ಹೋದರು. ಮರುದಿನ ಮತ್ತೆ ಸೇರಿದರು. ನಶೆ ಏರಿದ ಬಳಿಕ ಮುದುಕ 'ನಿನ್ನೆ ನಿಮ್ಮನ್ನು ಎಲ್ಲಿಯೋ ನೋಡಿದಂಗಿದೆ!, ಎಲ್ಲಿ ಅಂತಾ ನೆನಪಾಗ್ತಾ ಇಲ್ಲ!' ಅಂದ. 'ಸರಿಯಾಗಿ ಹೇಳಿದಿರಿ!, ನಾನೂ ಇದೇ ಮಾತನ್ನು ನಿಮಗೆ ಕೇಳಬೇಕು ಅಂದುಕೊಂಡಿದ್ದೆ!' ಅಂದ. 'ಸರಿ!, ನೀವು ಇರೋದೆಲ್ಲಿ?!' ಮುದುಕ ತರುಣನಿಗೆ ಕೇಳಿದ. 'ವೈಭವ ಅಪಾರ್ಟ್‌ಮೆಂಟ್, ಸೆಕೆಂಡ್ ಫ್ಲೋರ್‌ನಲ್ಲಿ' ತರುಣ ಉತ್ತರಿಸಿದ. ಮುದುಕ ಉತ್ಸಾಹದಿಂದ 'ನಾನೂ ಅದೇ ವೈಭವ ಅಪಾರ್ಟ್‌ಮೆಂಟ್‌ನ ಫಸ್ಟ್‌ಫ್ಲೋರ್‌ನಲ್ಲಿ ಇರೋದು!' ಅಂದ. ಪಕ್ಕದ ಟೇಬಲ್‌ನಲ್ಲಿ ಕುಳಿತಿದ್ದ ವ್ಯಕ್ತಿ, ಇವರ ಸಂಭಾಷಣೆಯನ್ನು ಕುತೂಹಲದಿಂದ ಕೇಳುತ್ತಿರುವಾಗ, ಪಕ್ಕದಲ್ಲಿ ನಿಂತಿದ್ದ ಸಪ್ಲೈಯರ್ 'ಅವರ ಕತೆ ಏನ್ ಕೇಳ್ತೀರಿ ಬಿಡಿ ಸರ್!, ಅವರಿಬ್ಬರೂ ಅಪ್ಪ, ಮಗ! ಕಳೆದ ಒಂದು ವರ್ಷದಿಂದ ಇದೇ ರೀತಿ ಮಾತಾಡ್ತಾ ಇರ್ತಾರೆ!' ಅಂದ.

**ಕೆ.ಜಿ. ಭದ್ರಣ್ಣವರ**

## ರೈಲು ಪ್ರಯಾಣ

ನೀರಜ್ ರೈಲು ನಿಲ್ದಾಣಕ್ಕೆ ಹೋದ. ಅವತ್ತು ಅವನು ಮೈಸೂರಿಗೆ ಹೋಗಬೇಕಿತ್ತು. ಆದರೆ ರೈಲು ಪ್ರಯಾಣಿಕರಿಂದ ಭರ್ತಿಯಾಗಿತ್ತು. ಕೂರುವುದಿರಲಿ, ನಿಲ್ಲುವುದಕ್ಕೂ ನೀರಜ್‌ಗೆ ಸ್ಥಳವಿರಲಿಲ್ಲ. ಸೀಟು ಖಾಲಿ ಮಾಡಿಸಲು ಉಪಾಯ ಹುಡುಕಿದ ಅವನು ಜೋರಾಗಿ 'ಹಾವು... ಹಾವು...' ಎಂದು ಕೂಗಿದ. ಕಣ್ಣು ಮುಚ್ಚಿ ತೆರೆಯುವುದರೊಳಗೆ ಪ್ರಯಾಣಿಕರೆಲ್ಲ ಅಲ್ಲಿಂದ ಓಡಿ ಬೇರೆ ಬೋಗಿಯಲ್ಲಿ ಹೋಗಿ ಕುಳಿತಿದ್ದರು. ಅವನು ಸಂತೋಷದಿಂದ ಇಡೀ ಬೋಗಿಯಲ್ಲಿ ಒಬ್ಬನೇ ಕುಳಿತು ನಿದ್ರಿಸಿದ. ಒಂದು ಗಂಟೆಯ ನಂತರ ಊರು ಬಂದಿರಬಹುದೆಂದು ತಿಳಿದು ಎಚ್ಚರಗೊಂಡು ಹೊರಗೆ ನೋಡಿದರೆ ರೈಲು ಇದ್ದಲ್ಲಿಯೇ ಇತ್ತು. ಸೀದಾ ರೈಲ್ವೆ ಅಧಿಕಾರಿಯ ಬಳಿ ಹೋಗಿ ಕಾರಣ ಕೇಳಿದ. ಅಧಿಕಾರಿ ಹೇಳಿದ, 'ಬೋಗಿಯಲ್ಲಿ ಹಾವಿದ್ದಿದ್ದರಿಂದ ಈ ಬೋಗಿಯೊಂದನ್ನು ಬಿಟ್ಟು ಉಳಿದೆಲ್ಲಾ ಬೋಗಿಗಳನ್ನು ಮೈಸೂರಿಗೆ ಕಳುಹಿಸಲಾಯಿತು.'



**ವಿ. ಹೇಮಂತ ಕುಮಾರ**